ದೇವಸ್ಥಾನ ಜೀರ್ಣೋದ್ಧಾರಕ್ಕೆ ನೆರವು

ಕೊಟ್ಟೂರು : ತಾಲೂಕು ಯೋಜನಾ ಕಚೇರಿ ವ್ಯಾಪ್ತಿಯ ತೊಟ್ಟಿಲಮಠ ವಲಯದ ಜೋಳದ ಕೂಡ್ಲಿಗಿ ಕಾರ್ಯಕ್ಷೇತ್ರದ ಈಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಂಜೂರಾದ 2 ಲಕ್ಷ ಮೊತ್ತದ ಡಿಡಿಯನ್ನು ಜಿಲ್ಲಾ ನಿರ್ದೇಶಕ ಸತೀಶ ಶೆಟ್ಟಿ ವಿತರಿಸಿದರು. ತಾಲೂಕು ಯೋಜನಾಧಿಕಾರಿ ಕಲ್ಲಪ್ಪ, ಜಗದೀಶ್ ಎನ್.ಟಿ., ಚಿದಾನಂದಪ್ಪ, ಲೋಕನಗೌಡ, ಕೊಟ್ರೇಶಪ್ಪ, ಶಿವಕುಮಾರ್, ಮಂಜುನಾಥ, ನೇತ್ರಾವತಿ ಹಾಗೂ ಸ್ವಸಹಾಯ ಸಂಘಗಳ ಸದಸ್ಯರು ಉಪಸ್ಥಿತರಿದ್ದರು.

ಜನರನ್ನು ವ್ಯರ್ಥಾ ಓಡಾಡಿಸದೆ ಕೆಲಸ ಮಾಡಿಕೊಡಿ

ವಿವಿಧ ಸರ್ಕಾರಿ ಕಚೇರಿಗಳಿಗೆ ಲೋಕಾಯುಕ್ತ ಅಧಿಕಾರಿಗಳ ತಂಡದ ಭೇಟಿ- ಕಡತ- ಸೇವೆ-ಸೌಲಭ್ಯ ಪರಿಶೀಲನೆ । ಸಾರ್ವಜನಿಕರ ದೂರು ವಿಚಾರಣೆ

ಸಂ.ಕ.ಸಮಾಚಾರ.ಕಂಪ್ಲಿ: ಪಟ್ಟಣದ ವಿವಿಧ ಸರ್ಕಾರಿ ಕಚೇರಿಗಳಿಗೆ ಬೆಂಗಳೂರಿನಿಂದ ಆಗಮಿಸಿದ ಲೋಕಾಯುಕ್ತ ಅಧಿಕಾರಿಗಳ ಮೂರು ತಂಡಗಳು ಭೇಟಿ ನೀಡಿ ಕಚೇರಿಗಳಲ್ಲಿನ ಕಡತಗಳು, ಆಯಾ ಕಚೇರಿಗಳು ಸಾರ್ವಜನಿಕರಿಗೆ ನೀಡುತ್ತಿರುವ ಸೇವೆಗಳನ್ನು ಕುರಿತು ಪರಿಶೀಲನೆ ನಡೆಸಿತು. ಸಮಗ್ರ ಮಾಹಿತಿ ಪಡೆದು ಸೂಕ್ತ ಸಲಹೆ ಸೂಚನೆ ನೀಡಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಲೋಕಾಯುಕ್ತ ಡಿ.ವೈ.ಎಸ್ಪಿ ಅನಿಲ್ ಕುಮಾರ್ ಎಚ್.ಆರ್. ಮತ್ತು ಜಿ. ಎಸ್.ಹೆಬ್ಬಾಳ್ ನೇತೃತ್ವದ ತಂಡ ಹಾಗೂ ಅಧಿಕಾರಿಗಳು ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಸಮಗ್ರ ಪರಿಶೀಲನೆ ನಡೆಸಿತು. ಹೊರ ರೋಗಿ ವಿಭಾಗ, ಶಸ್ತ್ರ ಚಿಕಿತ್ಸಾ ವಿಭಾಗ, ಔಷಧಿ ವಿತರಣಾ ಕೇಂದ್ರ, ವೈದ್ಯ ಕೊಠಡಿಗಳನ್ನು ಗರ್ಭಿಣಿ ಮತ್ತು ಬಾಣಂತಿಯರ ವಿಭಾಗಗಳನ್ನು ಪರಿಶೀಲಿಸಿತು. ವೈದ್ಯರು, ಸಿಬ್ಬಂದಿ, ಸಾರ್ವಜನಿಕರೊಂದಿಗೆ ಸಮಾಲೋಚಿಸಿತು.



ಕಂಪ್ಲಿ ಪುರಸಭೆಗೆ ಲೋಕಾಯುಕ್ತ ಡಿ.ವೈ.ಎಸ್ಪಿ. ಅನಿಲ್ ಕುಮಾರ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಪುರಸಭೆಗೆ ತಂಡ ಭೇಟಿ ನೀಡಿ ಸಾರ್ವಜನಿಕರಿಗೆ ಸಿಗುವ ಸೇವೆ, ಸಾರ್ವಜನಿಕರ ದೂರು, ಕಚೇರಿಯ ಸಿಬ್ಬಂದಿಗಳ ಮಾಹಿತಿ ಪಡೆದರು. ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಬೇಕು. ಅಲೆದಾಡಿಸದಂತೆ ಕೆಲಸಗಳನ್ನು ಫಲಾನುಭವಿಗಳಿಗೆ ಜನರನ್ನು ವ್ಯರ್ಥಾ ನಿಗದಿತ ಸಮಯದಲ್ಲಿ ಮಾಡಿಕೊಡಬೇಕೆಂದರು.

ಎಪಿಎಂಸಿ ಆವರಣದಲ್ಲಿರುವ ಭೂಮಾಪನಾ ಕಚೇರಿಗೆ ಭೇಟಿ ನೀಡಿ ಭೂ ಸರ್ವೆ, ಸಾರ್ವಜನಿಕರಿಗೆ ನೀಡುವ ಸೇವೆಗಳ ಬಗ್ಗೆ ಮಾಹಿತಿ ಪಡೆದರು. ಸಾರ್ವಜನಿಕರ ದೂರುಗಳ ಮೇಲೆ ವಿವಿಧ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿದ್ದು, ಕಚೇರಿಗಳಲ್ಲಿನ ಕಡತಗಳನ್ನು ಮತ್ತು ಸಾರ್ವಜನಿಕರಿಗೆ ನೀಡುತ್ತಿರುವ ಸೇವೆಗಳ ಮಾಹಿತಿ ಸಂಗ್ರಹಿಸಿ ಹಿರಿಯ ಅಧಿಕಾರಿಗಳಿಗೆ ಸಮಗ್ರವಾದ ವರದಿಯನ್ನು ನೀಡಲಾಗುವುದು ಎಂದರು.

ತಹಶೀಲ್ದಾರರೊಂದಿಗೆ ಸಮಾಲೋಚನೆ ನಡೆಸಿತು. ಕಚೇರಿಗೆ ಬರುವ ಸಾರ್ವಜನಿಕರಿಗೆ ಕುಳಿತುಕೊಳ್ಳಲು ನೆರಳಿನಲ್ಲಿ ಆಸನ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ವ್ಯವಸ್ಥೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಮಾಹಿತಿ ನೀಡುವ ನಾಮಫಲಕಗಳನ್ನು ಪ್ರದರ್ಶನ ಮಾಡಬೇಕು ಎಂದು ಸೂಚಿಸಿದರು. ತಹಶೀಲ್ದಾರ್ ಜೂಗಲ್ ಮಂಜುನಾಯಕ ಮಾತನಾಡಿ, ಕಂಪ್ಲಿ ನೂತನ ತಾಲೂಕಾಗಿರುವ ಕಾರಣ ಬಾಡಿಗೆ ಕಟ್ಟಡದಲ್ಲಿ ಕಚೇರಿ ನಡೆಯುತ್ತಿದೆ. ನೂತನ ತಾಲ್ಲೂಕು ಆಡಳಿತ ಸೌಧ ನಿರ್ಮಾಣವಾಗಿದ್ದು, ಶೀಘ್ರದಲ್ಲಿ ಅಲ್ಲಿಗೆ ಸ್ಥಳಾಂತರ ಮಾಡಲಾಗುವುದು. ಈ ಕಚೇರಿಯಲ್ಲಿಯೂ ಸಹಿತ ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯ ಒದಗಿಸಲಾಗಿದೆ ಎಂದರು. ಡಾ.ರವೀಂದ್ರ ಕನಕೇರಿ, ಇತರೆ ವೈದ್ಯರು, ಸಮುದಾಯ ಕೇಂದ್ರದ ಸಿಬ್ಬಂದಿಗಳು, ಪುರಸಭೆ ಪ್ರಭಾರ ಮುಖ್ಯಾಧಿಕಾರಿ ಬಿ.ಮಲ್ಲಿಕಾರ್ಜುನ ಮತ್ತು ಸಿಬ್ಬಂದಿ, ತಹಶೀಲ್ದಾರ್ ಕಚೇರಿ ಸಿಬ್ಬಂದಿಗಳು, ಭೂಮಾಪನಾ ಇಲಾಖೆಯ ಆಡಿಎಲ್ ಆರ್ ನರಸಪ್ಪ ಮತ್ತು ಸಿಬ್ಬಂದಿಗಳು ಹಾಗೂ ಲೋಕಾಯುಕ್ತ ಇಲಾಖೆಯ ಸಿಬ್ಬಂದಿಗಳಾದ ವಸಂತಕುಮಾರ್, ವಿಶ್ವಬಂಧು ಯಾದವ್, ಬಸವರಾಜ, ಮೋಹಿನುದ್ದೀನ್,ಎಂ.ಯು. ಸಲ್ಮಾ ಸೇರಿದಂತೆ ಇತರರು ಇದ್ದರು.



ಬಳ್ಳಾರಿ ನಗರದ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ (ಸಿಬಿ ಆರ್‌ಸೆಟಿ) ಆವರಣದಲ್ಲಿ 13 ದಿನದ ಕೃಷಿ ಉದ್ಯಮಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಕೃಷಿ ಉದ್ಯಮಿ ತರಬೇತಿಗೆ ಚಾಲನೆ

ಬಳ್ಳಾರಿ: ನಗರದ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ (ಸಿಬಿ ಆರ್‌ಸೆಟಿ) ಆವರಣದಲ್ಲಿ 13 ದಿನಗಳ ಉಚಿತ ಕೃಷಿ ಉದ್ಯಮಿ ತರಬೇತಿ ಕಾರ್ಯಕ್ರಮ ನಡೆಯಿತು,

ಪಶು ಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಡಾ. ಸದಾಶಿವ ಉಪ್ಪಾರ ಮಾತನಾಡಿ, ಗುರುವಾರ ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ರೈತರು ಹೈನುಗಾರಿಕೆ, ಕೋಳಿ ಸಾಕಾಣಿಕೆ, ಎರೆಹುಳು ಗೊಬ್ಬರ ತೊಟ್ಟಿ ರಚನೆ ಮುಂತಾದ ಪೂರಕ ಚಟುವಟಿಕೆಗಳ ಮೂಲಕ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡರೆ ಆರ್ಥಿಕವಾಗಿ ಸದೃಢರಾಗಲು ಸಾಧ್ಯ. ಇದಕ್ಕೆ ಇಂತಹ ತರಬೇತಿಗಳು ಹೆಚ್ಚು ಸಹಕಾರಿಯಾಗುತ್ತವೆ ಎಂದು ಹೇಳಿದರು. ಪ್ರತಿ ತಾಲೂಕು ಮಟ್ಟದಲ್ಲಿ ಪಶು ಸಂಗೋಪನಾ ಇಲಾಖೆಯಿಂದ ದೊರೆಯುವ ವಿವಿಧ ಸೌಲಭ್ಯಗಳ ಸದುಪಯೋಗವನ್ನು ರೈತರು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು. ಸಂಸ್ಥೆಯ ನಿರ್ದೇಶಕ ವಿನಯ್ ಕುಮಾರ್ ಬಿ. ಕೊಳ್ಳೂರುಮಠ, ಕೆನರಾ ಬ್ಯಾಂಕ್ ನ ಜಿಲ್ಲಾ ಲೀಡ್ ವ್ಯವಸ್ಥಾಪಕ ಗಿರೀಶ್ ವಿ. ಕುಲಕರ್ಣಿ ಮಾಹಿತಿ ಹಂಚಿಕೊಂಡರು. ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ರಾಜೇಂದ್ರ, ಜಿಲ್ಲಾ ಪಂಚಾಯತ್ ಎನ್‌ಆರ್‌ಎಲ್‌ಎಂ ಸಿಬ್ಬಂದಿ, ಉಪನ್ಯಾಸಕರಾದ ಜಡೇಪ್ಪ, ಸಿದ್ದಲಿಂಗಮ್ಮ, ಸಂತೋಷ್ ಕುಮಾರ್, ಪರಮೇಶ ಹಾಗೂ ಬಳ್ಳಾರಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ 35 ಜನ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

11 ರಂದು ಓಬವ್ವ ಜಯಂತಿ

ಸಂ.ಕ. ಸಮಾಚಾರ.ಬಳ್ಳಾರಿ: ನಾಡಿನ ಸ್ವಾಭಿಮಾನ, ಅಪ್ರತಿಮ ಸಾಹಸ ಹಾಗೂ ದೇಶಭಕ್ತಿಯ ಸಂಕೇತವಾಗಿರುವ ವೀರವನಿತೆ ಒನಕೆ ಓಬವ್ವ ಅವರ ಜಯಂತಿಯನ್ನು ನ.11 ರಂದು ಜಿಲ್ಲಾ ಕೇಂದ್ರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಸಹಾಯಕ ಆಯುಕ್ತರ ಕಚೇರಿಯ ತಹಶೀಲ್ದಾರ ಶೇಕ್ಷಾವಲಿ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಏರ್ಪಡಿಸಿದ್ದ ಒನಕೆ ಓಬವ್ವ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಂದು ಬೆಳಿಗ್ಗೆ 11 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಎಲ್ಲಾ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಶಿಷ್ಟಾಚಾರದನ್ವಯ ಆಹ್ವಾನ ಪತ್ರಿಕೆ ಮುದ್ರಿಸಿ, ಗಣ್ಯರನ್ನು ಆಹ್ವಾನಿಸಬೇಕು. ಒನಕೆ ಓಬವ್ವ ಅವರ ಶೌರ್ಯ, ತ್ಯಾಗ ಮತ್ತು ಸ್ವಾಭಿಮಾನದ ಬದುಕಿನ ಕುರಿತು ವಿಶೇಷ ಉಪನ್ಯಾಸ ನೀಡಲು ನುರಿತ ಉಪನ್ಯಾಸಕರನ್ನು ನಿಯೋಜಿಸಬೇಕು. ಕಾರ್ಯಕ್ರಮದಲ್ಲಿ ಸುಗಮ ಸಂಗೀತ ಇರಲಿದೆ ಎಂದರು.

ವೇದಿಕೆ ಕಾರ್ಯಕ್ರಮದಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳುವಂತೆ ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದ ಅವರು, ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸುವಂತೆ ಡಿಡಿಪಿಯು ಅಧಿಕಾರಿಗಳು ಕ್ರಮವಹಿಸಬೇಕು ಎಂದು ತಿಳಿಸಿದರು. ಸಮುದಾಯದ ಮುಖಂಡರು ಭಾಗವಹಿಸಿ ತಮ್ಮ ಸಲಹೆ ನೀಡಿದರು.



ನಿಡುಗುರ್ತಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಶಾಸಕ ಅನ್ನಪೂರ್ಣ ಈ. ತುಕಾರಾಮ್ ಪ್ರಜಾಸೇವಾ ಆಂದೋಲನ ಕಾರ್ಯಕ್ರಮ ಉದ್ಘಾಟಿಸಿದರು.

ಬಸ್ ಸಮಸ್ಯೆಗೆ ಸ್ಥಳದಲ್ಲೇ ಪರಿಹಾರ

ಸಂಡೂರು : ತಾಲೂಕಿನ ನಿಡುಗುರ್ತಿ ಗ್ರಾ ಪಂ ವ್ಯಾಪ್ತಿಯ ನಿಡುಗುರ್ತಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಶಾಸಕ ಅನ್ನಪೂರ್ಣ ಈ. ತುಕಾರಾಮ್ ಅಧ್ಯಕ್ಷತೆಯಲ್ಲಿ ಪ್ರಜಾಸೇವಾ ಆಂದೋಲನ ಸಭೆ ನಡೆಯಿತು.

ಗ್ರಾಮಗಳಲ್ಲಿನ ಸಮಸ್ಯೆಗಳನ್ನು ಮುಕ್ತವಾಗಿ ಅಧಿಕಾರಿಗಳ ಗಮನಕ್ಕೆ ತರಬೇಕು. ಅವುಗಳ ಪರಿಹಾರಕ್ಕೆ ತ್ವರಿತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಳೆಯ ಅಭಾವದಿಂದ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಬೇಕು. ರೈತರು ಕಡಿಮೆ ನೀರು ಬಳಸಿ ಬೆಳೆಯಬಹುದಾದ ಬೆಳೆಗಳಿಗೆ ಆದ್ಯತೆ ನೀಡಬೇಕು. ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳ ಮೂಲಕ ಕೃಷಿ ಮಾಡುತ್ತಿರುವ ರೈತರು ಸಹ ನೀರಿನ ಬಳಕೆಯಲ್ಲಿ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು. ಈ ಭಾಗದಲ್ಲಿ ಸಾರಿಗೆ ಸಂಸ್ಥೆಯ ಬಸ್ಸುಗಳು ನಿಗದಿತ ಸಮಯಕ್ಕೆ ಬರುತ್ತಿಲ್ಲ ಎಂದು ವಿದ್ಯಾರ್ಥಿಗಳು ಶಾಸಕರ ಗಮನಕ್ಕೆ ತಂದರು. ತಕ್ಷಣ ಸ್ಪಂದಿಸಿದ ಶಾಸಕರು ಸಾರಿಗೆ ಇಲಾಖೆಯ ಅಧಿಕಾರಿ ಲಕ್ಷ್ಮಣರನ್ನು ಕರೆದು, ಮರುದಿನದಿಂದಲೇ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ನಿಗದಿತ ಸಮಯಕ್ಕೆ ಬಸ್ ಸಂಚರಿಸಲು ಅಗತ್ಯ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಸಭೆಯಲ್ಲಿ ವಾರ್ಡ್ ಅಧ್ಯಕ್ಷ ಅಕ್ಷಯ್ ಲಾಡ್, ಆಶಾಲತಾ ಸೋಮಪ್ಪ, ನೂರುದ್ದೀನ್ ಎಸ್., ರೇಣುಕಾಚಾರ್ಯ ಬಿ.ಎಂ., ಪ್ರಭಾರ ತಹಶೀಲ್ದಾರ್ ಸುಧಾ ಅರಮನೆ, ಡಾ. ಐ.ಆರ್. ಅಕ್ಕಿ, ನಾಗರಾಜ್, ವೆಂಕಟೇಶ್ ಸೇರಿದಂತೆ ಉಪಸ್ಥಿತರಿದ್ದರು. ಶರಣಬಸಪ್ಪ ಕರಿಶೆಟ್ಟಿ ಸ್ವಾಗತಿಸಿದರು. ಶ್ರೀಧರಮೂರ್ತಿ ಕಾರ್ಯಕ್ರಮ ನಿರೂಪಿಸಿದರು

ರಸ್ತೆ ಅಭಿವೃದ್ಧಿಗೆ 110 ಕೋಟಿ ಅನುದಾನ

ಸಂಕ ಸಮಾಚಾರ ತಂಬ್ರಹಳ್ಳಿ: ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳನ್ನು ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಿ ಆಯ್ಕೆ ಮಾಡಲಾಗುವುದು. ಮೈತ್ರಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಮೂಲಕ ಚುನಾವಣೆ ಎದುರಿಸಲಾಗುವುದು ಎಂದು ಶಾಸಕ ಕೆ. ನೇಮಿರಾಜ್ ನಾಯ್ಕ್ ತಿಳಿಸಿದರು. ಹಗರಿಬೊಮ್ಮನಹಳ್ಳಿ ತಾಲೂಕಿನ ಚಿಲುಗೋಡು ಗ್ರಾಮದ ಬಳಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ 5054 ಯೋಜನೆಯಡಿ ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಿರುವ ಚಿಲುಗೋಡು– ತಂಬ್ರಹಳ್ಳಿ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದಾದ್ಯಂತ ಹದಗೆಟ್ಟಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸಲು 110 ಕೋಟಿ ಅನುದಾನ ಒದಗಿಸಲಾಗಿದ್ದು,

ಶೇ.80ರಷ್ಟು ಹದಗೆಟ್ಟ ರಸ್ತೆಗಳನ್ನು ಆದ್ಯತೆಯ ಮೇರೆಗೆ ಅಭಿವೃದ್ಧಿಪಡಿಸಲಾಗುವುದು ಎಂದರು. ಕೆಂಚಟನಹಳ್ಳಿ– ವರದಾಪುರ ಕೆರೆಗೆ ಶಾಶ್ವತವಾಗಿ



ಚಿಲುಗೋಡು ಗ್ರಾಮದ ಬಳಿ ಕೋಟಿ ವೆಚ್ಚದಲ್ಲಿ ಚಿಲುಗೋಡು ತಂಬ್ರಹಳ್ಳಿ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ನೇಮಿರಾಜ್ ನಾಯ್ಕ್ ಭೂಮಿಪೂಜೆ ನೆರವೇರಿಸಿದರು.

ನೀರು ತುಂಬಿಸುವ ಯೋಜನೆಯ ಡಿಪಿಆರ್ ಸಿದ್ಧಪಡಿಸುವ ಸಲುವಾಗಿ ಕೈಗೊಳ್ಳಲಾಗುತ್ತಿರುವ ಸರ್ವೆ ಕಾರ್ಯದ ಸ್ಥಳಕ್ಕೆ ಶಾಸಕರು ಭೇಟಿ ನೀಡಿ ಪರಿಶೀಲಿಸಿದರು.

ಬಾಚಿಗೊಂಡನಹಳ್ಳಿ ರಾರಾಳ್ ಶೇಖರಪ್ಪ, ಕನ್ನಿಹಳ್ಳಿ ಚಂದ್ರಶೇಖರ್, ಬಣಕಾರ ಕೊಟ್ರೇಶ್, ಕೃಷ್ಣಮೂರ್ತಿ ಶೆಟ್ರು, ಹೋಟೆಲ್ ಸಿದ್ದರಾಜ್, ಚಿತ್ತವಾಡ್ಗಿ ಪ್ರಕಾಶ್, ಚಿಲುಗೋಡು ಕೋರಿ ಸಂಗಪ್ಪ, ಉತ್ತಂಗಿ ಹನುಮಪ್ಪ, ಉಗ್ಗಣ್ಣನವರ ಕರಿಯಪ್ಪ, ಗುಜನೂರು ಕರಿಯಪ್ಪ, ನಂದಿಬಂಡಿ ಕರಿಯಪ್ಪ, ಏಣಗಿ ಬುಳ್ಳಪ್ಪ, ಬಿ.ದೇವಿಪ್ರಸಾದ್, ಬ್ಯಾಟಿ ನಾಗರಾಜ್ ಉಪಸ್ಥಿತರಿದ್ದರು.

ನರಕಾಸುರ ಪ್ರತಿಕೃತಿ ದಹನ

ಪಣಜಿ: ದೀಪಾವಳಿಯ ಹಿಂದಿನ ದಿನ ಗೋವಾದಲ್ಲಿ ಭಕ್ತಿ ಮತ್ತು ಜಾಗರಣೆಯ ಸಂಕೇತವಾಗಿ ನರಕಾಸುರನ ದಹನ ಆಚರಣೆಯನ್ನು ಅತ್ಯಂತ ವಿಜೃಂಭಣೆಯಿಂದ ನಡೆಸಲಾಗುತ್ತದೆ. ಗೋವಾದ ಸಂಸ್ಕೃತಿಯಲ್ಲಿ ನರಕಾಸುರನ ನರಕಚತುರ್ದಶಿ ಮಹತ್ವದ ಹಬ್ಬವಾಗಿದೆ.

ಗೋವಾದಲ್ಲಿ ದೀಪಾವಳಿ ಎಂದರೆ ಕೇವಲ ಬೆಳಕಿನ ಹಬ್ಬ ಮಾತ್ರವಲ್ಲ, ಅದು ಕೆಟ್ಟದ್ದರ ಮೇಲೆ ಒಳ್ಳೆಯದ ಗೆಲುವಿನ ಸಂಕೇತ. ನರಕಚತುರ್ದಶಿಯ ಮುನ್ನಾದಿನ ಗೋವಾದಾದ್ಯಂತ ಯುವಕರು ಮತ್ತು ವಿವಿಧ ಕಲಾ ಸಂಘಟನೆಗಳು ಬೃಹತ್ ನರಕಾಸುರನ ಪ್ರತಿಕೃತಿಗಳನ್ನು ತಯಾರಿಸುತ್ತಾರೆ. ಈ ಬೊಂಬೆಗಳನ್ನು ಕಾಗದ, ಹುಲ್ಲು, ಬಣ್ಣ ಮತ್ತು ವಿದ್ಯುತ್ ದೀಪಗಳಿಂದ ಅತ್ಯಂತ ಆಕರ್ಷಕವಾಗಿ ಹಾಗೂ ರಾಕ್ಷಸ ರೂಪದಲ್ಲಿ ಸೃಷ್ಟಿಸಲಾಗುತ್ತದೆ. ರಾಜ್ಯದ ವಿವಿಧ ಭಾಗಗಳಲ್ಲಿ (ವಿಶೇಷವಾಗಿ ಪಣಜಿ, ಮಡಗಾಂವ, ಮತ್ತು ಮಾಪ್ಸಾಗಳಲ್ಲಿ) ಬೃಹತ್ ನರಕಾಸುರನ ಪ್ರತಿಕೃತಿಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆ.

ರಾತ್ರಿಯಿಡೀ ಯುವಕರು ಸಂಗೀತ, ನೃತ್ಯ ಮತ್ತು ಧ್ವನಿ–ಬೆಳಕಿನ ಪ್ರದರ್ಶನದೊಂದಿಗೆ





ನರಕಾಸುರನ ದಹನ..

ಸಂಭ್ರಮಿಸುತ್ತಾರೆ. ನಂತರ ನಸುಕಿನ ಜಾವ (ಬ್ರಹ್ಮ ಮುಹೂರ್ತದಲ್ಲಿ), ಕೃಷ್ಣನು ನರಕಾಸುರನನ್ನು ಸಂಹಾರ ಮಾಡಿದ ನೆನಪಿಗಾಗಿ ಈ ಬೃಹತ್ ಪ್ರತಿಕೃತಿಗಳನ್ನು ಸುಡಲಾಗುತ್ತದೆ.

ಅಭ್ಯಂಗ ಸ್ನಾನ : ನರಕಾಸುರ ದಹನದ ನಂತರ, ಜನರು ಮನೆಗೆ ಮರಳಿ ಸುಗಂಧ ತೈಲ ಹಚ್ಚಿ ಅಭ್ಯಂಗ ಸ್ನಾನ ಮಾಡುತ್ತಾರೆ. ನಂತರ 'ಕಾರಿಟ್' (ಹಿಂಡಲೆ ಕಾಯಿ) ಎಂಬ ಸಣ್ಣ ಕಹಿ ಹಣ್ಣನ್ನು ಕಾಲಿನಿಂದ ತುಳಿದು, ಕಹಿ ರಸವನ್ನು ನೆಕ್ಕುವ ಮೂಲಕ ಕೆಟ್ಟದ್ದರ ವಿನಾಶವನ್ನು ಸಂಕೇತಿಸುತ್ತಾರೆ. ನರಕಾಸುರನ ದಹನದ ನಂತರ ಗೋವಾದ ಪ್ರತಿಯೊಂದು ಮನೆಗಳಲ್ಲೂ ಹಣತೆಗಳನ್ನು ಬೆಳಗಿಸಿ, ಪಟಾಕಿ ಸಿಡಿಸಿ, ದೀಪಾವಳಿಯನ್ನು ಅತ್ಯಂತ ಸೌಹಾರ್ದತೆ ಹಾಗೂ ಶ್ರದ್ಧೆಯಿಂದ ಆಚರಿಸಲಾಗುತ್ತದೆ. ಅಭ್ಯಂಗ ಸ್ನಾನದ ನಂತರ ಮನೆ ಮನೆಗಳಲ್ಲಿ ಅವಲಕ್ಕಿ ಮಾಡಿ ಹಬ್ಬದ ಅವಲಕ್ಕಿ ತಿನ್ನುವ ಪದ್ಧತಿಯಿದೆ. ಅಕ್ಕಪಕ್ಕದ ಮನೆಯವರನ್ನೂ ಅವಲಕ್ಕಿ ತಿನ್ನಲು ಆಮಂತ್ರಿಸುತ್ತಾರೆ.

ಉಡಿ ತುಂಬುವುದು ಸಂಸ್ಕೃತಿ ಪ್ರತೀಕ

ಕಂಪ್ಲಿ: ಪ್ರತಿಯೊಬ್ಬ ಮಹಿಳೆಗೆ ತವರು ಮನೆಯ ಸೀರೆ ಅತಿಮುಖ್ಯ ಮಹಿಳೆ ಕುಟುಂಬದ ಆಧಾರ ಸ್ತಂಭ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ರಾಷ್ಟ್ರದ ಸತ್